ಬೇಡವೋ... ಯಾವುದೂ ಅರ್ಥವಾಗಿರಲಿಲ್ಲ. ಹಿಂಜರಿಯುತ್ತಲೇ ಸುಜಾತಾಳಿಗೊಂದು ವಾಟ್ಸ್‌ಆ್ಯಪ್ ಕರೆ ಮಾಡಿದ.

ಅಖ್ತರ ಮಾತನಾಡುವುದಕ್ಕೆ ಮೊದಲೇ ಸುಜಾತಾ ಮಾತಿಗೆ ಪ್ರಾರಂಭಿಸಿದಳು. "ಹೇ... ವಾಟ್ ಎ ಸರ್ಪ್ರೈಸ್... ವೇಟ್... ನಾನು ನನ್ನ ಹೆಡ್ ಫೋನ್ ಹಾಕ್ಕೊಂಡು ವಿಡಿಯೊ ಕಾಲ್ ಮಾಡ್ತೀನಿ... ನಿನ್ನ ಜೊತೆ ಮಾತಾಡಬೇಕು. ದಿಸ್ ವಸ್ ಅನ್ ಎಕ್ಸ್ಪೆಕ್ಟೆಡ್... ಬಟ್ ನೀನು ಕಾಲ್ ಮಾಡಿದ್ದು ತುಂಬಾಖುಷಿಯ ವಿಷಯ... ನೀನೂ ವಿಡಿಯೊ ಕಾಲ್‌ಗೆ ರೆಡಿಯಾಗು"

ಅವನು ಸಾಂತ್ವನದ ಮಾತು ಹೇಳುವುದಕ್ಕೆ ಮೊದಲೇ ಸುಜಾತಾಳ ದನಿಯಲ್ಲಿನ ಉತ್ಸಾಹ ಅವನನ್ನು ಅಶ್ಚರ್ಯಚಕಿತನನ್ನಾಗಿಸಿತು. ವಿಡಿಯೊ ಕಾಲ್ ಮಾಡಿದಾಗ ಆ ಬದಿಯಲ್ಲಿ ಸುಜಾತಾ ಕೈಬೀಸಿ "ಹಾಯ್" ಎಂದಳು.

"ಸಾರಿ... ನನಗೆ ಗೊತ್ತೇ ಇರಲಿಲ್ಲ... ಐ ಜಸ್ಟ್ ಗಾಟ್ ಟು ನೋ..." ಎಂದು ಅಖ್ತರ ತಡವರಿಸಿ ಹೇಳಿದ..

"ಯಾ... ಏನು ಮಾಡೋದು... ಸ್ವಲ್ಪ ಸಮಯವಾಯಿತು. ಐ ಯಾಮ್ ಕಮಿಂಗ್ ಟು ಟರ್ಮ್ಸ್... ಇಲ್ಲಿ ಎಲ್ಲವೂ ಗೋಜಲಾಗಿದೆ.. ಇರಲಿ, ನಿನ್ನ ಕಥೆ ಹೇಳು.. ನಿನ್ನ ವ್ಯಾಪಾರ ಹೇಗಿದೆ? ಯು ನೋ... ನಮ್ಮ ಈಸ್ಟ್ ಆಫ್ರಿಕಾ ವ್ಯಾಪಾರದ ಸಲುವಾಗಿ ನಾನು ಅಲ್ಲಿಗೆ ಬರುತ್ತೇನೆಂದು ಹೇಳಿದ್ದೆ... ಇಲ್ಲವಾದರೆ ಪರ್ಸನಲ್ ವಿಸಿಟ್ ಅಂತ... ಸದ್ಯಕ್ಕೆ ಎರಡೂ ಸಾಧ್ಯವಿಲ್ಲ. ವ್ಯಾಪಾರವೇ ಇಲ್ಲ ಯು ನೋ..."

"ಹೌದು ಅನಿರುದ್ಧನ ಜೊತೆ ಮಾತಾಡಿದ್ದೆ, ಅವನು ಈ ವಿಷಯಗಳನ್ನು ಹೇಳಿದ... ಈಗ ಹೇಗೆ ನಿಭಾಯಿಸುತ್ತಿದ್ದೀಯ?"

"ಇಟ್ಸ್ ಡಿಫಿಕಲ್ಟ್. ಹೋರಾಡಬೇಕೋ ಬಿಟ್ಟುಕೊಡಬೇಕೋ ಗೊತ್ತಾಗುತ್ತಿಲ್ಲ. ಈಗಾಗಲೇ ಗೋಜಲಾಗಿರುವ ಮನಸ್ಸಿಗೆ ಶಾಂತಿ ಬೇಕೋ... ಅಥವಾ ನ್ಯಾಯಕ್ಕಾಗಿ ಹೋರಾಡಬೇಕೋ ಗೊತ್ತಾಗುತ್ತಿಲ್ಲ. ಒಂದು ಕಡೆ ನಾನು ಒಂಟಿಯಾಗಿದ್ದೇನೆ. ನಿನಗೆ ಗೊತ್ತು ಈ ವ್ಯಾಪಾರದ ಮೂಲ ಇದ್ದದ್ದು ಮುಕುಂದಸಾಗರನ ಡಿಸೈನುಗಳಲ್ಲಿ. ನಾನು ಕೇವಲ ಮಾರಾಟ ಮಾತ್ರ ಮಾಡುತ್ತಿದ್ದೆ. ಈಗ ಆ ಆತ್ಮವೇ ಇಲ್ಲವೆಂದ ಮೇಲೆ ಯಾವುದಕ್ಕಾಗಿ ಹೋರಾಡಬೇಕು... ಅದೇ ಕಾಲಕ್ಕೆ ಅವನು ತನ್ನೆಲ್ಲ ಸೃಜನಶೀಲತೆಯನ್ನು ಧಾರೆಯೆರೆದು ಬೆಳೆಸಿದ ವ್ಯಾಪಾರವನ್ನು ಸುಮ್ಮನೆ ಯಾರದೋ ಪಾದಗಳಿಗೆ ಒಪ್ಪಿಸಿ ಬರಬೇಕೇ ಎನ್ನುವುದೂ ಒಂದು ಪ್ರಶ್ನೆಯೇ. ಈ ದ್ವಂದ್ವದಲ್ಲಿದ್ದೀನಿ. ನನಗೆ ಫಿಲಸಾಫಿಕಲ್ ಗೈಡೆನ್ಸ್ ಬೇಕು... ಫೈನಾನ್ಷಿಯಲ್ ಮತ್ತು ಲೀಗಲ್ ಗೈಡೆನ್ಸ್ ಇದೆ... ಆದರೆ ನಾನು ಕೈಗೊಳ್ಳಬೇಕಿರುವ ತೀರ್ಮಾನಗಳು ತೀರಾ ಆಬ್‌ಸ್ಟ್ರಾಕ್ಟ್ ವಿಷಯಗಳಿಗೆ ಸಂಬಂಧಿಸಿದ್ದು... ನೀನೇ ಅದಕ್ಕೆ ಸರಿಯಾದ ಗೈಡು... ನೀನು ರಿಲಿಜಿಯಸ್ಸೂ ಹೌದು... ಸ್ಪಿರಿಚ್ಯುವಲ್ಲೂ ಹೌದು..."

"ಅರೇ... ನಾನು ನನ್ನ ಭಕ್ತಿಮಾರ್ಗದಲ್ಲಿ ನಡೆಯುತ್ತಿದ್ದೇನೆಯೇ ಹೊರತು ಗುರುವಾಗುವ, ಉಪದೇಶ ಕೊಡುವ ಯಾವ ಸಾಮರ್ಥ್ಯವೂ ನನ್ನ ಹತ್ತಿರ ಇಲ್ಲ. ನನಗೆ ಮುಖ್ಯವಾಗಿ ತಟ್ಟಿದ ಮಾತೆಂದರೆ, ಇನ್ ದಿಸ್ ಮಾಡರ್ನ್ ಡೇ... ಎರಡು ತಿಂಗಳಾಗುವವರೆಗೂ ನನಗೀ ಮಾತು ಗೊತ್ತೇ ಆಗಲಿಲ್ಲವಲ್ಲಾ ಅನ್ನೋದು. ಅದೇ ನನಗೆ ತುಂಬಾ ಭಾರದ ವಿಷಯವಾಗಿದೆ."

"ಅದು ಹಾಗಿರಲಿ. ಚಿಂತೆಯಿಲ್ಲ. ದೇರ್ ಆಯೇ ದುರುಸ್ತ್ ಆಯೇ... ನೀನು ಮೊದಲೇ ಮಾತಾಡಿದ್ದರೂ ನಿನ್ನ ಹತ್ತಿರ ಏನು ಮಾತಾಡಬೇಕೂಂತ ನನಗೇ ಗೊತ್ತಿರುತ್ತಿರಲಿಲ್ಲ. ಈಗ ನಿನ್ನನ್ನು ಸ್ಪಷ್ಟವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ನಿನ್ನ ಸಲಹೆ ತೆಗೆದುಕೊಳ್ಳಬಹುದು. ಆದರೆ ನನ್ನ ಗೋಳು ಬರೇ ಮುಕುಂದನನ್ನು ಕಳಕೊಂಡದ್ದಲ್ಲ... ಬದಲಿಗೆ ಅವನು ಹೋದ ರೀತಿಯಿಂದಾಗಿ ವಿಚಾರಣೆ